**P.W-1**

**( ದಿನಾಂಕ.02-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲುಃ** ಶ್ರೀ. S.S.C ವಕೀಲರಿಂದ

1 ನೇ ಪ್ರತಿವಾದಿ ನನಗೆ ಅಜ್ಜನಾಗಬೇಕು ಎಂದರೆ ಸರಿ. 2000 ಇಸವಿ ಮುಂಚೆ ನನ್ನ ತಂದೆ ಮತ್ತು ಕಾಕಂದಿರು ಎಲ್ಲರೂ ಕೂಡಾ ಏಕತ್ರ ಕುಟುಂಬದಲ್ಲಿ ವಾಸಿಸುತ್ತಿದ್ದರು ಎಂದರೆ ಸರಿ. ಮುಂದೆ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪಂದಿರು ನಡುವೆ ಚೆನ್ನಾಗಿ ನಡೆದೇ ಇರುವ ಕಾರಣ, ನನ್ನ ಅಜ್ಜ 1 ನೇ ಪ್ರತಿವಾದಿ ಬೇರೆ ಮಾಡಿಕೊಟ್ಟರು ಎಂದರೆ ಸರಿಯಲ್ಲ. ನನ್ನ ಅಜ್ಜ ಮಾಡಿಕೊಟ್ಟ ವಾಟನಿ ಪತ್ರ ನನ್ನ ತಂದೆ ಹತ್ತಿರ ಇದೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ನನ್ನ ಅಜ್ಜ 1 ನೇ ಪ್ರತಿವಾದಿ ಸರ್ವೆ ನಂಬರ.302/2 ರಲ್ಲಿ 11 ಎಕರೆ 23 ಗುಂಟೆ ಜಮೀನನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ಪ್ರಕಾರ ನನ್ನ ತಂದೆಗೆ ಸರ್ವೆ ನಂಬರ. 179 ರಲ್ಲಿ 3 ಎಕರೆ 27 ಗುಂಟೆ ಜಮೀನ್ನು, ಸರ್ವೆ ನಂಬರ. 170 ರಲ್ಲಿ 1 ಎಕರೆ 35 ಗುಂಟೆ ಜಮೀನನ್ನು, ಸರ್ವೆ ನಂಬರ.173 ರಲ್ಲಿ 2 ಎಕರೆ 25 ಗುಂಟೆ ಜಮೀನನ್ನು ಹಾಗೂ ಸರ್ವೆ ನಂಬರ.8/6 ರಲ್ಲಿ 25 ಗುಂಟೆ ಜಮೀನ್ನು ನನ್ನ ತಂದೆಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಈ ಪ್ರಕಾರ ನನ್ನ ಅಜ್ಜ ಸಾಕ್ಷಿದಾರರಾದ ಮಾಣಿಕಪ್ಪ ಮಾದುರಾಯ ಪೋಲಿಸ ಪಾಟೀಲ, ಮರಗಯ್ಯ ಸ್ವಾಮಿ, ಶಿವಾನಂದ ಮಂಗಾಣೆ, ಬಸವಣ್ಣಪ್ಪ ಜಮಾದಾರ,

**P.W-1**

ಅಂಬಾರಾಯ ಬಿರಾದಾರ ಹಾಗೂ ಪ್ರತಿವಾದಿ 3 ರಿಂದ 5 ರವರ ಸಮಕ್ಷಮ 20 ರೂಪಾಯಿ ಛಾಪಾ ಕಾಗದದ ಮೇಲೆ ವಾಟನಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**